# ಎರಡನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ

ದಿನಾಂಕ 02 ನೇ ಜೂನ್ ಮಾಹೆ 2023 ನೇ ಇಸವಿ.

**ಸಿ.ಸಿ. ನಂಃ 1722/2022**

ರಾಜ್ಯ ಸರ್ಕಾರದ ಪರವಾಗಿ

ಪೋಲಿಸು ಉಪನಿರೀಕ್ಷಕರು,
ಕಾರ್ಕಳ ಗ್ರಾಮಾಂತರ ಪೋಲಿಸ್ ಠಾಣೆ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ. …... ಫಿರ್ಯಾದುದಾರರು

- ವಿರುದ್ಧ -

1. ಸಿ.ಡಿ. ಅಬ್ದುಲ್ ರಹಿಮಾನ್,
ಪ್ರಾಯಃ 22 ವರ್ಷ,
ತಂದೆಃ ಸಿ.ಎ. ದಾವ್ದೂದ್,
ವಾಸಃ 7 ನೇ ಬ್ಲಾಕ್, ಕೃಷ್ಣಾಪುರ, ಸುರತ್ಕಲ್,
ಮಂಗಳೂರು ತಾಲೂಕು,
ದಕ್ಷಿಣ ಕನ್ನಡ ಜಿಲ್ಲೆ.

2. ಮೊಹಮ್ಮದ್ ಪಾರೀಸ್,
ಪ್ರಾಯಃ 22 ವರ್ಷ,
ತಂದೆಃ ಅಬ್ದುಲ್ ರಹಿಮಾನ್,
ವಾಸಃ ನಂ.6-11, ಪೆರಿಮಾರ್ ಮನೆ,
ಪುದು ಅಂಚೆ ಮತ್ತು ಗ್ರಾಮ,
ಬಂಟ್ವಾಳ ತಾಲೂಕು,
ದಕ್ಷಿಣ ಕನ್ನಡ ಜಿಲ್ಲೆ. …... ಆರೋಪಿತರು

## ಆಪಾದನೆ

1 ನೇ ಆರೋಪಿಯಾದ ನೀವು, ದಿನಾಂಕ 05.02.2022 ರಂದು ಸಮಯ ರಾತ್ರಿ 8.37 ಗಂಟೆಯಿಂದ 8.40 ಗಂಟೆಯ ಮಧ್ಯೆ ನಿಮ್ಮ ಬಾಬ್ತು ಒಪ್ಪೋ ಎ 9 ಕಂಪನಿಯ ಸಿಪಿಹೆಚ್ 1937 ಮೊಬೈಲ್ ಫೋನ್ ನಂಬರ್ 7026109766 ನೇಯದರಿಂದ ಸಾಕ್ಷಿ 1 ನೇಯವರು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಕುಂದಾಪುರ ಕಾಲೇಜಿನಲ್ಲಿ ಹಿಜಾಬ್ ಬಗ್ಗೆ ನಡೆಯುತ್ತಿದ್ದ ವಿಡಿಯೋವನ್ನು ಹಂಚಿಕೊಂಡ ವಿಚಾರದಲ್ಲಿ ಅವರ ಮೊಬೈಲ್ ನಂಬರ್ 9686229121 ಗೆ 4 ಬಾರಿ ಕರೆಮಾಡಿ

ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡ ಪೋಟೋವನ್ನು ಡಿಲಿಟ್ ಮಾಡದಿದ್ದರೆ ಕೊಂದು ಬಿಡುವುದಾಗಿ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 507 ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ 2 ಆರೋಪಿಯಾದ ನೀವು ದಿನಾಂಕ 06.02.2022 ರಂದು ಮೇಲೆ ಹೇಳಿದ ವಿಚಾರವಾಗಿ ಸಮಯ ರಾತ್ರಿ 9.08 ಗಂಟೆಗೆ ನಿಮ್ಮ ಬಾಬ್ತು ಒಪ್ಪೋ ಎ 33 ಮೊಬೈಲ್ ನಂಬರ್ 6366338457 ನೇಯದರಿಂದ ಸಾಕ್ಷಿ 1 ನೇಯವರ ಮೊಬೈಲ್ ನಂಬರ್ 9686229121 ನೇಯದಕ್ಕೆ 2 ಬಾರಿ ಕರೆ ಮಾಡಿ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡ ಪೋಟೋವನ್ನು ಡಿಲಿಟ್ ಮಾಡದಿದ್ದರೆ ಕೊಲ್ಲದೇ ಬಿಡುವುದಿಲ್ಲವೆಂದು ಜೀವಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 507 ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

<u>ಆರೋಪಿ 1 ಮತ್ತು 2 ಃ</u>

ಪ್ರಶ್ನೆ 1ಃ ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ಪ್ರತಿರಕ್ಷೆ ಸಾಕ್ಷಿ ಮಾಡಲು ಬಯಸುತ್ತೀರೋ?

ಉತ್ತರಃ

( 1 ಮತ್ತು 2 ಆರೋಪಿತರಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ. )

2 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,
ಕಾರ್ಕಳ.